ಎಂದಿನಂತೆ ಪ್ರಸಾದ್ (ಪೂರ್ತಿ ಹೆಸರು ಎಂ.ಡಿ. ರಾಮ್ ಪ್ರಸಾದ್) ಎದ್ದು ತುಸು ವ್ಯಾಯಾಮ ಮಾಡಿ, ವಾಕಿಂಗ್ ಹೋಗಿಬಂದರು. ಬೆಳಗ್ಗೆ ಏಳು ಗಂಟೆ. ಸ್ನಾನವಾಯಿತು. ತುಸು ಓಟ್ಸನ್ನು ಬೇಯಿಸಿಕೊಂಡು ತಿಂದರು. ಅದೇ ಅವರ ಬ್ರೇಕ್ ಫಾಸ್ಟ್. ಅವರ ಹೆಂಡತಿ ರೇವತಿ ಮನೆಯ ಮುಂದೆ ಮತ್ತು ಹಿಂದೆ ಗಿಡಗಳಿಗೆ ನೀರು ಹಾಕುತ್ತಿದ್ದರು. ಆಕೆ ಯಾವ ಕೆಲಸವನ್ನೂ ಮೌನವಾಗಿ ಮಾಡುತ್ತಿರಲಿಲ್ಲ. ಸದಾ ಗಂಡನನ್ನು ಕರೆದು ಏನಾದರೂ ಹೇಳುವ ಅಭ್ಯಾಸ. “ಈ ಗಿಡ ಬಾಡಿ ಹೋಗ್ತಾ ಇದೆ, ನೋಡ್ಕೊಂಡು ಸುಮ್ಮನೇ ಇದೀರಾ. ಆ ರೂಮಿನಲ್ಲಿ ಎಷ್ಟು ಕಸ ಇದೆ. ಸ್ವಲ್ಪ ವ್ಯಾಕ್ಯೂಮ್ ಮಾಡಬಾರದಾ?” ಇತ್ಯಾದಿ, ಇತ್ಯಾದಿ. ಯಾವಾಗ ಯಾವುದಕ್ಕೆ ಕರೆ ಬರುವುದೋ ಯಾರಿಗೆ ಗೊತ್ತು! ಹಲವಾರು ವರ್ಷಗಳಿಂದ ಪರಿಪಾಲಿಸಿಕೊಂಡು ಬಂದ ಸಂಪ್ರದಾಯ, ತಿಂಡಿಯ ನಂತರ ಪ್ರಸಾದ್ ಕಂಪ್ಯೂಟರ್ ಮುಂದೆ ಕುಳಿತರು. ತಮಗೆ ಬಂದಿದ್ದ ಇ–ಮೇಲುಗಳನ್ನು ನೋಡಿದರು. ಎಲ್ಲಾ ಕೆಲಸಕ್ಕೆ ಬಾರದವು, ಲಿಂಕ್ಡ್ ಇನ್‌ನಿಂದ, ಪತ್ರಿಕೆಗಳಿಂದ, ಟ್ರಾವೆಲ್ ಏಜೆಂಟುಗಳಿಂದ, ಇನ್ನು ತಾವೇ ಬಯಸಿದ್ದ ನಾನಾ ಕಂಪನಿಗಳಿಂದ. ಎಲ್ಲವನ್ನೂ ಓದದೇ ಒಮ್ಮೆಗೇ ಡಿಲೀಟ್ ಮಾಡಿದರು.

ಅವರ ಮುಂದಿನ ಹೆಜ್ಜೆ ಫೇಸ್‌ಬುಕ್. ಅದನ್ನು ತೆರೆದು ಕೆಳಗೆ ಸ್ಕ್ರೋಲ್ ಮಾಡಲಾರಂಭಿಸಿದರು. ಒಂದಾದ ಮೇಲೆ ಒಂದರಂತೆ ಮೋದಿ ಗುಣಗಾನದ ಚಿತ್ರಗಳು ಮತ್ತು ವಿಡಿಯೊಗಳು. ಇದ್ದದ್ದೇ ಎನ್ನುತ್ತಾ ಮುಂದೆ ಬಂದದ್ದನ್ನು ನೋಡಿ ದಂಗಾದರು. ಅವರು ಕಂಡದ್ದು ಅನಿತಾಳ ಫೋಟೊ. ಸ್ಕ್ರೋಲ್ ಮಾಡುವುದನ್ನು ನಿಲ್ಲಿಸಿದರು. ಚಿತ್ರವನ್ನು ದಿಟ್ಟಿಸಿ ನೋಡಿದರು. ‘ಹೌದು ಅವಳೇ.’ ಅಪ್ಪಟ ಹಿಂದೂ ನಾರಿಯಂತೆ ಸೀರೆಯುಟ್ಟು, ತನ್ನ ಆಭರಣಗಳನ್ನೆಲ್ಲಾ ಪ್ರದರ್ಶಿಸಿಕೊಂಡು ಕುಳಿತಿದ್ದಾಳೆ. ತೊಡೆಯ ಮೇಲಿರುವ ಬಾಲಕ ಅವಳ ಮೊಮ್ಮಗ ಇರಬೇಕು. ಅವರ ಮನಸ್ಸು ಸಿಡ್ನಿಯಿಂದ ಬೆಂಗಳೂರಿನ ಮಲ್ಲೇಶ್ವರಕ್ಕೆ ಹಾರಿಹೋಯಿತು. ಅಷ್ಟೇ ಅಲ್ಲ, ನಲವತ್ತು ವರ್ಷ ಹಿಂದಕ್ಕೆ ಭೂತಯಾನ ಮಾಡಿತು. ಅವರಿಗೆ ಚೆನ್ನಾಗಿ ಗೊತ್ತಿದ್ದ ಹುಡುಗಿ. ತಮಗಿಂತ ಹತ್ತು ವರ್ಷ ಚಿಕ್ಕವಳು. ಇದ್ದದ್ದು ತಾವಿದ್ದ 15ನೇ ಕ್ರಾಸಿನಲ್ಲೇ. ಅವಳು ಶಿಶುವಿಹಾರಕ್ಕೆ ಹೋಗುವುದನ್ನು, ಸ್ಕರ್ಟ್ ಹಾಕಿಕೊಂಡು ಶಾಲೆಗೆ ಹೋಗುವುದನ್ನು ನಂತರ ಸೀರೆಯುಟ್ಟು ಕಾಲೇಜಿಗೆ ಹೋಗುವುದನ್ನು ಪ್ರತ್ಯಕ್ಷವಾಗಿ ನೋಡಿದ್ದರು. ವೈದ್ಯಳಾಗಿ ವೃತ್ತಿ ಜೀವನವನ್ನೂ ಪ್ರಾರಂಭಿಸಿದಳು. ಇವರಿಗೆ ಚೆನ್ನಾಗಿಯೇ ಗೊತ್ತಿದ್ದ ಕುಟುಂಬವಾದರೂ ಅವಳ ಅಪ್ಪ ಅವರನ್ನು ಅವಳ ಮದುವೆಗೆ ಕರೆದಿರಲಿಲ್ಲ. ಪ್ರಸಾದ್ ಅವಳನ್ನು ಮದುವೆಯ ನಂತರವೂ ನೋಡಿದ್ದರು. ಅವಳೂ ನಗುನಗುತ್ತಾ ಮಾತನಾಡಿದ್ದಳು. ಕೆಲವು ವರ್ಷಗಳ ಹಿಂದೆ ಬೆಂಗಳೂರಿಗೆ ಹೋಗಿದ್ದಾಗ ಅವಳು ಯಾರದೋ ಮದುವೆಯಲ್ಲಿ ಸಿಕ್ಕಿ ಬಹಳ ಮಾತನಾಡಿಸಿ, ಅವಳ ಕಾರ್ಡ್ ಕೊಟ್ಟಳು. ಕ್ರಮೇಣ ಫೇಸ್‌ಬುಕ್ಕಿನಲ್ಲಿ ಫ್ರೆಂಡ್ ಆದಳು. ಅವಳಿಗೆ ಆಗಲೇ ಮೊಮ್ಮಗ! ‘ಚೆನ್ನಾಗಿದ್ದಾನೆ ಮೊಮ್ಮಗ’ ಎಂದು ಇವರೂ ತಮ್ಮ ಕಾಮೆಂಟ್ ಹಾಕಿದರು.

ಅವರಿಗೆ ಸೋಜಿಗ ಎನಿಸಿದ್ದು ಅವಳ ಫೋಟೊಗೆ ಬಂದಿದ್ದ 178 ಲೈಕುಗಳು ಮತ್ತು 37 ಕಾಮೆಂಟುಗಳು. ಎಷ್ಟಾದರೂ ವೈದ್ಯೆ, ಸಾಕಷ್ಟು ಜನರ ಪರಿಚಯವಿರುತ್ತೆ